**ದಿವಾಣಿ ಹಾಗೂ ಪ್ರ.ದ.ನ್ಯಾ ದಂ.ಗಳ  ನ್ಯಾಯಾಲಯ ಕುಂದಗೋಳ**

**ಓ ಎಸ್  ನಂಃ22/2024**

**ಡಿ ಡಬ್ಲ್ಯೂಃ1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ  04.03.2026**

**ಪಾಟೀ ಸವಾಲುಃ ಶ್ರೀ ಎಸ್ ಎಸ್ ಕೆ ವಕೀಲರಿಂದ ವಾದಿ ಪರ ವಕೀಲರುಃ**

1. ನಾನು ಶಾಲೆ ಕಲಿತಿರುವುದಿಲ್ಲ. ವಾದಿಯವರು ಈ ದಾವೆಯನ್ನು ಯಾಕೆ ಹಾಕಿದ್ದಾರೆ ಅಂತಾ ಗೊತ್ತಿಲ್ಲ. ನನಗೆ ಈ ದಾವೆ ಬಗ್ಗೆ ನೋಟಿಸು ಬಂದ ನಂತರ ಗೊತ್ತಾಗಿರುತ್ತದೆ. ನೋಟಿಸು ಬಂದ ನಂತರ ನನಗೆ ವಾದಿ ಈ ದಾವೆ ಮನೆ ಬಗ್ಗೆ ಹಾಕಿರುವ ಬಗ್ಗೆ ಗೊತ್ತಾಯಿತು. ಈ ದಾವೆಗೆ ನನ್ನ ಪ್ರತಿವಾದ ಪತ್ರ ಸಲ್ಲಿಸಿದ್ದೇನೆ. ನನ್ನ ಪ್ರತಿವಾದಿ ಪತ್ರ ಬರೆಯಲು ನಮ್ಮ ಹಿರಿಯರು ಮಾಹಿತಿಯನ್ನು ನೀಡಿರುತ್ತಾರೆ. ಅವರು ಸಹಿ ಸಹ ಹಾಕಿರುತ್ತಾರೆ. ನನಗೆ ಅವರ ಹೆಸರು ಗೊತ್ತಿಲ್ಲ.

2. ವಾದಿ ಈ ದಾವೆಯನ್ನು ದಾವಾ ಆಸ್ತಿ ಸಿಟಿಎಸ್ ಸ.ನಂ. 1767 ಗೆ ಸಂಬಂದಪಟ್ಟ ಹಾಗೆ ದಾಖಲಿಸಿರುತ್ತಾರೆ. ದಾವಾ ಆಸ್ತಿ ಮೂಲತಃ ನನ್ನ ಅಜ್ಜ ದಾದೆಖಾನ ಇವರಿಗೆ ಸಂಬಂದಪಟ್ಟಿದ್ದು ಎಂದರೆ ಸರಿ. ನನ್ನ ಅಜ್ಜ ತೀರಿಕೊಂಡಿದ್ದಾರೆ. ನನ್ನ ಅಜ್ಜನ ಮರಣ ನಂತರ ಅವರ ಮಕ್ಕಳು ಸಾಹೇಬಖಾನ, ರಸೂಲಖಾನ, ಗುಲಾಬಖಾನ, ಮಹ್ಮದಖಾನ ಮತ್ತು ಹುಸೇನಖಾನ ಇವರಿಗೆ  ವಾರಸಾನಾತೆಯಿಂದ ಸದರಿ ಆಸ್ತಿ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಜ್ಜನ ಮರಣ ನಂತರ ಎಲ್ಲಾ ಆಸ್ತಿಯನ್ನು ನನ್ನ ದೊಡ್ಡಪ್ಪನ ಮಕ್ಕಳಿಗೆ ಕೊಟ್ಟಿರುತ್ತೇನೆ. ಎಲ್ಲಾ ಆಸ್ತಿ ಎಂದರೆ 8 ಕೂರಿಗೆ ಹೊಲ, ಮನೆಯನ್ನು ಕೊಟ್ಟಿರುತ್ತೇನೆ.

3.ನನ್ನ ಅಜ್ಜ ದಾದೆಖಾನ ಇವರು ತೀರಿಕೊಂಡ ನಂತರ ದಾವಾ ಆಸ್ತಿಗೆ ಮಹ್ಮದಸಾಬ ಇವರು ಮಾಲೀಕರು ಅಗಿರುತ್ತಾರೆ. ದಾದೆಸಾಬ್‌ಗೆ ಮಹ್ಮದಸಾಬ ಮಗ ಆಗಬೇಕು. ಮಹ್ಮದಸಾಬ ಇವರಿಗೆ ದಾವಾ ಆಸ್ತಿ ನಾಡಗೇರ ಇವರ ಮನೆತನದಿಂದ ಬಕ್ಷೀಸನಾತೆಯಿಂದ ಬಂದಿರುತ್ತದೆ.

4. ದಾವಾ ಆಸ್ತಿ ನಾಡಗೇರ ಇವರ ಆಸ್ತಿ ಅಂತ ಹೇಳಿದ್ದು,  ನಾಡಗೇರ ಎಂದರೆ ಯಾರು ಎಂದರೆ ಸಾಕ್ಷಿ ನಾಡಗೇರ ಬ್ರಾಹ್ಮಣರು ಎಂದು ನುಡಿಯುತ್ತಾರೆ. ದಾವಾ ಆಸ್ತಿಗೂ ಹಾಗೂ ನಾಡಗೇರ ಇವರ ಮನೆತನಕ್ಕೂ ಏನೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೊದಲನಿಂದ ಅವರು ನಾಡಗೇರ ಮತ್ತು ದೇಶಪಾಂಡೆ ಇವರ ಮನೆಯಲ್ಲಿ ದುಡಿಯುತ್ತಾ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

5. ದಾವಾ ಆಸ್ತಿಗೆ ಮಾಲೀಕ ದಾದೆಖಾನ ಎಂದರೆ ಸರಿ. ದಾದೆಖಾನ ಇವರು ತೀರಿಕೊಂಡ ನಂತರ ದಾವಾ ಆಸ್ತಿಗೆ ಮಹ್ಮದಸಾಬ ಮಾತ್ರ ಮಾಲೀಕರು ಆಗಿರುತ್ತಾರೆ. ದಾದೆಖಾನ ಇವರು

ಮಹ್ಮದಸಾಬ ಇವರಿಗೆ ದಾವಾ ಆಸ್ತಿ ಬಕ್ಷೀಸ ಮಾಡಿರುತ್ತಾರೆ. ಮಹ್ಮದಖಾನ ಇವರಿಗೆ ಬಕ್ಷೀಸನ್ನು ನಾಡಗೇರ ಇವರು ನೀಡಿರುತ್ತಾರೆ.

6. ನನ್ನ ಪ್ರತಿವಾದ ಪತ್ರದಲ್ಲಿ ಸದರಿ ಸಂಗತಿಯಾದ ನಾಡಗೇರ ಇವರ ಕುಟುಂಬದಿಂದ ಆಸ್ತಿ ಮಹ್ಮದಖಾನ ಇವರಿಗೆ ಬಂದ ಬಗ್ಗೆ ತಿಳಿಸಿರುವುದಿಲ್ಲ. ಸದರಿ ವಿಷಯವನ್ನು ಪ್ರತಿವಾದ ಪತ್ರದಲ್ಲಿ ಹೇಳಲು ಯಾವುದೇ ತೊಂದರೆ ಇರಲಿಲ್ಲ. ನಾಡಗೇರ ಇವರಿಂದ ಮಹ್ಮದಖಾನ ಇವರಿಗೆ ದಾವಾ ಆಸ್ತಿ ಬಕ್ಷೀಸ್ ಮೂಲಕ ಬಂದಿರುತ್ತದೆ ಅಂತ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಾದೆಖಾನ ಇವರ ಮಗ ಮಹ್ಮದಖಾನಗೆ ಬಕ್ಷೀಸ್ ಮಾಡಿರುವ ಬಗ್ಗೆ ಹೇಳಿದ್ದು, ಆ ಕಾಗದವನ್ನು ನಾನು ನೋಡಿಲ್ಲ. ಆ ರೀತಿ ಬಕ್ಷೀಸ್ ಕಾಗದ ಇದೆ ಅಂತ ಅದು ನಮ್ಮ ಅಣ್ಣತಮ್ಮಂದಿರ ಬಳಿ ಇರಬಹುದು ಅಂತ ಗೊತ್ತು ಎಂದು ನುಡಿಯುತ್ತಾರೆ. ಸದರಿ ಕಾಗದ ನನ್ನ ಅಣ್ಣತಮ್ಮಂದಿರ ಬಳಿ ಇದೆ ಅಂತ ಹೇಳಿದ್ದು, ಅದು ರಾಜೇಸಾಬ ಹವಾಲ್ದಾರ ಆದ ಮಹ್ಮದಸಾಬ ಇವರ ಮಗನ ಬಳಿ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯದಿಂದ ರಾಜೇಸಾಬ ಇವರ ಬಳಿಯಿಂದ ತರಿಸಿಕೊಳ್ಳಲು ನನಗೆ ತೊಂದರೆ ಇರುವುದಿಲ್ಲ. ಈಗ ನನ್ನ ಪಾಟೀ ಸವಾಲಿನಲ್ಲಿ ಹೇಳಿದ ವಿಷಯಗಳನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳದೆ, ಈಗ ಸುಳ್ಳಾಗಿ ಸೃಷ್ಟಿಸಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿ ಮನೆಯಲ್ಲಿ ನಾನು, ನನ್ನ ತಮ್ಮ ಹಿಂದಿನ ಬಾಗಿಲದ ಕಡೆಗೆ ಇದ್ದು, ಮುಂದಿನ ಬಾಗಿಲದ ಕಡೆಗೆ ದೌಲತಸಾಬ ಇವರು ವಾಸವಾಗಿದ್ದಾರೆ. ದಾವಾ ಆಸ್ತಿಯಲ್ಲಿ ನಾನು ಮತ್ತು ನನ್ನ ತಮ್ಮ ನಮ್ಮ ತಂದೆಯಿಂದ ಸದರಿ ಮನೆ ಬಂದ ಕಾರಣ ವಾಸವಾಗಿದ್ದೇವೆ. ದಾವಾ ಆಸ್ತಿ ನಮ್ಮ ತಂದೆ ಮಾಡಿದ್ದು, ನನ್ನ ತಂದೆಗೆ ದಾವಾ ಆಸ್ತಿ ಮೊದಲನಿಂದ ಬಂದಿರುತ್ತದೆ. ಈ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿಲ್ಲ, ಅದು ನನ್ನ ತಂದೆಗೆ ಅವರ ತಂದೆಯಿಂದ ಬಂದಿದೆ. ನನ್ನ ತಂದೆಯ ತಂದೆ ದಾದೆಖಾನ.

9. ನನ್ನ ಅಜ್ಜ ದಾದೆಖಾನ ಇವರು ತೀರಿಕೊಂಡ ನಂತರ ದಾವಾ ಆಸ್ತಿ ನನ್ನ ತಂದೆಗೆ ವಾರಸನಾತೆಯಿಂದ ಬಂದಿರುತ್ತದೆ. ದಾದೆಖಾನ ಇವರ ಇನ್ನು ಉಳಿದ ಮಕ್ಕಳಿಗೂ ದಾವಾ ಆಸ್ತಿ ವಾರಸಾನತೆಯಿಂದ ಬಂದಿರುತ್ತದೆ ಎಂದರೆ ಸರಿ. ಈ ರೀತಿ ಇರುವ ಬೇರೆ ಮಕ್ಕಳು ಹೆಸರು ಸಾಹೇಬಖಾನ, ರಸೂಲಖಾನ, ಗುಲಾಬಖಾನ, ಮಹ್ಮದಖಾನ ಮತ್ತು ಹುಸೇನಖಾನ ಎಂದರೆ ಸರಿ. ಈ ಐದು ಜನ ಅಣ್ಣತಮ್ಮಂದಿರಲ್ಲಿ ಯಾವುದೇ ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ. ಇವರೆಲ್ಲರೂ ತನ್ನ ತಂದೆ ದಾದೆಖಾನ ಇವರ ಅವಿಭಜಿತ ಆಸ್ತಿಯಲ್ಲಿ ಅವಿಭಜಿತವಾಗಿ ವಾಸವಾಗಿದ್ದಾರೆ ಎಂದರೆ ಸರಿ.

10. ದಾದೆಖಾನ ಇವರ ಮಕ್ಕಳಾದ ಸಾಹೇಬಖಾನ, ರಸೂಲಖಾನ, ಗುಲಾಬಖಾನ, ಮಹ್ಮದಖಾನ ಮತ್ತು ಹುಸೇನಖಾನ ಇವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಈ ಐದು ಜನರ ಹೆಂಡತಿ ಮಕ್ಕಳು ವಾರಸನಾತೆಯಿಂದ ಸದರಿ ಮನೆಯ ಮಾಲೀಕತ್ವ ಹೊಂದಿದ್ದಾರೆ ಎಂದರೆ ಸರಿ.

ದಾವಾ ಆಸ್ತಿ ಈ ಎಲ್ಲರಿಗೂ ಸಾಮೂಹಿಕ ಹಿತ ಮತ್ತು ಮಾಲೀಕತ್ವದ ಆಸ್ತಿ ಎಂದರೆ ಸರಿ. ಈ ಐದು ಜನರ ಮಕ್ಕಳ ಮತ್ತು ಹೆಂಡತಿಯರ ಮಧ್ಯ ಯಾವುದೇ ಪಾಲು ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ.

11. ದಾವಾ ಆಸ್ತಿ ಎಲ್ಲರಿಗೂ ಕೂಡಿಕೊಂಡು ವಾಸವಿರಲು ಚಿಕ್ಕದಾಗುತ್ತದೆ ಎಂದರೆ ಸರಿ. ಆದ್ದರಿಂದ ಕೇಲವ್ರೂಬ್ಬರು ಬೇರೆ ಬೇರೆಯಾಗಿ ಹುಬ್ಬಳ್ಳಿ, ಕುಂದಗೋಳ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸದರಿ ಮನೆಯಲ್ಲಿ ವಾಸವಿರುವ ಜನರಲ್ಲಿ ನಾನು ಒಬ್ಬ ಎಂದರೆ ಸರಿ. ಸಾಕ್ಷಿಗೆ ನಿಪಿಃ2 ರಿಂದ 6 ಪೋಟೋಗಳನ್ನು ನೋಡಿ ಗುರುತಿಸಲು ಹೇಳಿದಾಗ ಸಾಕ್ಷಿ ಅದು ಮೊದಲನೆಯದಾಗಿ ಹೌದು ಅಂತ ಹೇಳಿ, ನಂತರದಲ್ಲಿ ಅದು ದಾವಾ ಆಸ್ತಿ ಮನೆಯೆ ಅಲ್ಲ ಎಂದು ನುಡಿಯುತ್ತಾರೆ.

12. ದಾವಾ ಆಸ್ತಿ 200 ವರ್ಷಗಳ ಹಳೆಯ ಮನೆ ಆಗಿರುತ್ತದೆ. ಸದರಿ ಮನೆ 200 ವರ್ಷದ ಹಳೆಯ ಮನೆ ಅಂತ ಊರಿನವರು ಹೇಳಿದ ಆದಾರದ ಮೇಲೆ ಹೇಳುತಿದ್ದೇನೆ. ಸದರಿ ಮನೆಯ ಮೇಲ್ಛಾವಣಿ ನಾನೇ ತೆಗೆದಿದ್ದೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ತಗಡ ಹಾಕಿ 10 ವರ್ಷ ಆಗಿದೆ. ದಾವಾ ಆಸ್ತಿ ಮನೆಯ ಛಾವಣಿಯನ್ನು 2024 ರಲ್ಲಿ ಯಾರಿಗೂ ಹೇಳದೆ ಕೇಳದೆ ನಾನು ಒಬ್ಬನೇ ತೆಗೆದು ಹಾಕಿರುತ್ತೇನೆ ಎಂದರೆ ಸಾಕ್ಷಿ ಮಾಳಗಿಯೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮಾಳಗಿಯನ್ನು ನಾನೇ ತೆಗೆದಿರುತ್ತೇನೆ.

(ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು**

**ಕುಂದಗೋಳ.**